ಓ ಎಸ್ ನಂಃ 116/2016
ಡಿ ಡಬ್ಲ್ಯೂ ಃ 1

ದಿಃ 28.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ವಿ ಕೆ ವಕೀಲರಿಂದ :-**

ತಾವು ಹಿಂದಿನ ಮುದ್ದತ್ತಿನಲ್ಲಿ ತಮ್ಮ ಪಾಟೀ ಸವಾಲಿನಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಮೌಖಿಕವಾಗಿ ವಿಭಾಗ ಆಗಿದೆ ಅದರ ಪ್ರಕಾರ ಪಹಣಿಯಲ್ಲಿ ನಮೂದಾಗಿದೆ ಎಂದು ಹೇಳಿದ್ದೀರಿ, ತಾವು ನ್ಯಾಯಾಲಯಕ್ಕೆ ಪಹಣಿಗಳನ್ನು ಕೊಟ್ಟಿದ್ದು ಪಹಣಿಯ ಸಾಗುವಳಿ ಕಲಂ ನಲ್ಲಿ ನಮೂದಾಗಿದೆ. ಸದರಿ ಪಹಣಿ ಪತ್ರಿಕೆಗಳನ್ನು ವಿಭಾಗ ಆದ ಬಗ್ಗೆ ನಮೂದಾಗಿದೆಯ ಎಂದರೆ ಸಾಕ್ಷಿಯು ಸಾಗುವಳಿ ಕಲಂ ನಲ್ಲಿ 4 ಜನರ ಹೆಸರುಗಳು ನಮೂದಾಗಿದೆ. ಸಾಕ್ಷಿಗೆ 4 ಪಹಣಿ ಪತ್ರಿಕೆಗಳನ್ನು ತೋರಿಸಲಾಗಿದ್ದು ಸಾಕ್ಷಿಯು ಸದರಿ ಪಹಣಿ ಪತ್ರಿಕೆಗಳು ದಾವಾ ಸ್ವತ್ತಿನ ಪಹಣಿ ಪತ್ರಿಕೆಗಳು ಎಂದು ಒಪ್ಪಿದ ಮೇರೆಗೆ ಸದರಿ ಪಹಣಿ ಪತ್ರಿಕೆಗಳನ್ನು **ನಿಪಿ 27 ರಿಂದ ನಿಪಿ 30 ಎಂದು** ಗುರುತಿಸಲಾಯಿತು. ನಿಪಿ 27 ರಿಂದ 30 ರ ಪಹಣಿ ಪತ್ರಿಕೆಗಳಲ್ಲಿ ಚಲುವಯ್ಯ ಅಥವಾ ಚಲುವಯ್ಯನ ಮಕ್ಕಳ ಹೆಸರು ನಮೂದಾಗಿದೆಯಾ ಎಂದರೆ ಸಾಕ್ಷಿ ಮೋಸದಿಂದ ಬರೆಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 2006-07 ನೇ ಸಾಲಿನಲ್ಲಿ ಪಹಣಿ ಪತ್ರಿಕೆಗಳಲ್ಲಿ ಇರುವ ಯಾರ ಹೆಸರಿನಲ್ಲಿರುವ ವಿಸ್ತೀರ್ಣದಲ್ಲಿರುವ ಜಮೀನನ್ನು ತಾವು ಖಾತೆ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಚನ್ನಪ್ಪ ನವರ ಹೆಸರು ಜಮೀನನ್ನು ಖಾತೆ ಮಾಡಿಸಿಕೊಂಡಿದ್ದಾರೆ. ಸಾಕ್ಷಿ ಸ್ವತಃ ಮುಂದುವರಿದು ವಾದಿಗೆ ಸರ್ವೆ ನಂ. 36 ರಲ್ಲಿ 1 ಎಕರೆ 17 ಗುಂಟೆ ಮಾತ್ರ ಸ್ವಾಧೀನಾನುಭವದಲ್ಲಿದ್ದು ಅವರು ಮೋಸದಿಂದ ಖಾತೆ ಮಾಡಿಸಿಕೊಂಡಿದ್ದಾರೆ. ಚನ್ನಪ್ಪನವರ ಹೆಸರಿನಲ್ಲಿರುವ ಖಾತೆಯನ್ನು ತಾವು ಆತನಿಗೆ ತಿಳಿಯದೇ ಖಾತೆ ಮಾಡಿಸಿಕೊಂಡು ಸದರಿ ವಿಚಾರವಾಗಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ಆರ್ ಆರ್ ಟಿ ಸಿ ಆರ್ ನಂ. 331 /06-07 ಅಧಿಕೃತ ಜ್ಞಾಪನ ಪತ್ರದ ನಕಲು ಆಗಿದ್ದು ಸದರಿ ದಾಖಲೆಯನ್ನು ಸಾಕ್ಷಿಯ ಒಪ್ಪಿಗೆ ಮೇರೆಗೆ **ನಿಪಿ 31** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ನಮ್ಮ ಒಂದೇ ಜಮೀನಿಗೆ ಖಾತೆ ಆಗಿದ್ದು ಬೇರೆ ಬೇರೆ ಜಮೀನಿಗೆ

ಓ ಎಸ್ ನಂಃ 116/2016

ಡಿ ಡಬ್ಲ್ಯೂ ಃ 1

ಸಂಬಂಧಪಟ್ಟಂತೆ ಖಾತೆ ಆಗಿದೆ.

ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,

ಮಾಗಡಿ.